**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**
**ಸಿ ಸಿ ನಂಃ 391/2022**

ಸಾಕ್ಷಿಯ ಹೆಸರು ಃ ಹೇಮಂತ ಗೌಡ ಸಿ.ಡಬ್ಲ್ಯು 3
ತಂದೆಯ ಹೆಸರು ಃ ಜಯರಾಮ ಪಿ.ಡಬ್ಲ್ಯು 3
ವಯಸ್ಸು ಃ 23 ವರ್ಷ
ಉದ್ಯೋಗ ಃ ಖಾಸಗಿ ಉದ್ಯೋಗ
ವಾಸ ಸ್ಥಳ ಃ ಕನಕಪುರ.

**ದಿನಾಂಕಃ 11-09-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಚಾಸಾ-1, 2 ಮತ್ತು 4 ನನ್ನ ಸ್ನೇಹಿತರು. ಮೃತ ಭಾರ್ಗವ ಇತನು ತೀರಿಕೊಂಡಿದ್ದಾನೆ, ಆತನ ಕೂಡಾ ನಮ್ಮ ಸ್ನೇಹಿತ. ನಾವು ದಿನಾಂಕ 04-02-2021 ರಂದು ಬೆಂಗಳೂರಿನಿಂದ ಪ್ರವಾಸಕ್ಕೆಂದು ಹೊರಟಿದ್ದೆವು. ಆ ಸಮಯದಲ್ಲಿ ನಾವು ನಮ್ಮ ಪ್ರಯಾಣಕ್ಕೆ ಜೂಮ್ ಕಂಪನಿಯ ಕಾರನ್ನು ಬಾಡಿಗೆ ಪಡೆದುಕೊಂಡಿದ್ದೆವು. ಸದರಿ ವಾಹನವನ್ನು ನ್ಯಾಯಾಲಯದ ಮುಂದೆ ಇರುವ ನನ್ನ ಸ್ನೇಹಿತ ಚಲಾಯಿಸುತ್ತಿದ್ದನು. ಅಪಘಾತ ಆಗಿ 20 ದಿನಗಳ ನಂತರದಲ್ಲಿ ಪೊಲೀಸರು ನನ್ನನ್ನು ಅಪಘಾತ ನಡೆದ ಸ್ಥಳಕ್ಕೆ ಕರೆಸಿ ಫೋಟೊ ತೆಗೆಸಿದ್ದಾರೆ. ಉಳಿದ ದಾಖಲೆಗಳಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಪಡೆದಿದ್ದಾರೆ. ಸಾಕ್ಷಿ ಸ್ಥಳ ಮತ್ತು ಜಪ್ತಿ ಪಂಚನಾಮೆ ಮೇಲೆ ಇರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.3 ಮತ್ತು 4, ಸಾಕ್ಷಿಯ ಸಹಿಗಳನ್ನು ನಿಪಿ.3 ಎ ಮತ್ತು 4 ಎ ಎಂದು ಗುರುತಿಸಲಾಯಿತು. ಅದೇ ರೀತಿ ಸ್ಥಳ ಪಂಚನಾಮೆ ಫೋಟೊವನ್ನು ನಿಪಿ.5, ಅಮಾನತ ಪಂಚನಾಮೆಗೆ ಸಂಬಂಧಿಸಿದ ಎರಡು ಫೋಟೊಗಳನ್ನು ನಿಪಿ.6 ಮತ್ತು 7 ಎಂದು ಗುರುತಿಸಲಾಯಿತು. ನಿಪಿ.3 ಮತ್ತು 4 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-**

ದಿನಾಂಕ 06-02-2021 ರಂದು ಬೆಳಗ್ಗೆ 11 ಗಂಟೆ ಸುಮಾರಿಗೆ ಅಪಘಾತ ಆದ ಸ್ಥಳದಲ್ಲಿ ಅಂದರೆ ನಾನು ತೋರಿಸಿದ ಸ್ಥಳದಲ್ಲಿ ಚಾಸಾ-11 ಮತ್ತು 12 ಇರವ ಸಮಕ್ಷಮ ಸ್ಥಳ ಮಹಜರ ಜರುಗಿಸಿ ನನಗೆ ಓದಿ ತಿಳಿಸಿ ಸ್ಥಳದಲ್ಲಿಯೇ ನನ್ನ ಸಹಿ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ನಂತರ ನನ್ನನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ನನ್ನ ಸಮಕ್ಷಮ ಠಾಣೆಯ ಆವರಣದಲ್ಲಿದ್ದ ನಮ್ಮ ವಾಹನವನ್ನು ಕೂಡಾ ಪಂಚನಾಮೆ ಬರೆಯುವ ಮೂಲಕ ಅಮಾನತಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ.6 ಮತ್ತು 7 ರಂತೆ ಫೋಟೊ ತೆಗೆಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿ ನನ್ನ ಸ್ನೇಹಿತ ಇರುವ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

CW 3
PW 3



**<u>ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ:</u>**

ಇರುವುದಿಲ್ಲ ಎಂದು ಹೇಳುತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

***ಓ ಹೇ ಕೇ ಸ ಇ ಎ ಒ***

Sd/-

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***